(ಇ) ಹಾಗಿದ್ದಲ್ಲಿ, ಈ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಯಾವ ಕ್ರಮ ಕೈಗೊಳ್ಳುವುದು?

ಶೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

(ಅ) ಬಂದಿದೆ.

(ಆ) ಬಂದಿದೆ.

(ಇ) ಕೋರಮಂಗಲ-ಚಲ್ಲಘಟ್ಟ ಕಣಿವೆಯಲ್ಲಿ ಈಗ 163 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ದ್ವಿತೀಯ ಹಂತದ ಕೊಳಚೆ ನೀರು ಸಂಸ್ಕರಣ ಘಟಕ ಕಾರ್ಯ ನಿರ್ವಹಿಸುತ್ತಿದೆ. ಈ ಘಟಕಕ್ಕೆ ಪ್ರಸ್ತುತ 163 ದಶಲಕ್ಷ ಲೀಟರ್ ದಿನಂಪ್ರತಿ ವಿನ್ಯಾಸ ಸಾಮರ್ಥ್ಯದ ಎದುರಾಗಿ 100 ರಿಂದ 110 ದಶಲಕ್ಷ ಲೀಟರ್ ದಿನಂಪ್ರತಿಯಷ್ಟು ಕೊಳಚೆ ನೀರು ಹರಿದು ಬರುತ್ತಿದೆ. ಈ ಘಟಕವು ಈಗ ಹರಿದು ಬರುತ್ತಿರುವ ಕೊಳಚೆ ನೀರನ್ನು ಸಮರ್ಪಕ ರೀತಿಯಲ್ಲಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯು ನಿಗದಿ ಪಡಿಸಿರುವ ಪರಿಮಿತಿಯಲ್ಲಿ ಸಂಸ್ಕರಣೆ ಮಾಡುತ್ತಿದೆ. ಸಂಸ್ಕರಿಸಿದ ಕೊಳಚೆ ನೀರು ಕೆಳದಂಡೆಯಲ್ಲಿರುವ ಬಳ್ಳಂದೂರು ಕೆರೆಯನ್ನು ಸೇರುತ್ತಿದೆ. ಈ ಪ್ರದೇಶದ ಸುತ್ತ ಮುತ್ತಲು ಇರುವ ಕೊಳಚೆ ಪ್ರದೇಶಗಳಲ್ಲಿ ಮತ್ತು ಒಳ ಚರಂಡಿ ವ್ಯವಸ್ಥೆ ಇಲ್ಲದ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ಕೊಳಚೆ ನೀರು ಹಾಗೂ ಕೆಲವು ಕಡೆ ಒಳಚರಂಡಿ ವ್ಯವಸ್ಥೆಯು ಹಾನಿಯುಂಟಾಗಿರುವ ಕಾರಣದಿಂದ ಕೊಳಚೆ ನೀರು ಹರಿಯುವ ಕಾಲುವೆಗಳಲ್ಲಿ ಹರಿದು ಸಂಸ್ಕರಣೆ ಘಟಕವನ್ನು ತಲುಪದೇ ನೇರವಾಗಿ ಬಳ್ಳಂದೂರು ಕೆರೆಯನ್ನು ಸೇರಿ ಕೆರೆಯ ನೀರು ಕಲುಷಿತಗೊಂಡಿದೆ. ತೆರೆದ ಮಳೆ ನೀರು ಹರಿಯುವ ಕಾಲುವೆಗಳಲ್ಲಿ ಹರಿಯುತ್ತಿರುವ ಕೊಳಚೆ ನೀರನ್ನು ಸಂಸ್ಕರಣೆ ಘಟಕಕ್ಕೆ ಹರಿಯ ಬಿಡುವಂತೆ ಮಾಡುವ ಕೆಲಸಗಳನ್ನು ಮಂಡಲಿಯು ಹಂತಹಂತವಾಗಿ ತೆಗೆದುಕೊಳ್ಳುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದಲ್ಲಿರುವ ಕಾರ್ಖಾನೆಗಳು.

1837 (2284) ಶ್ರೀ ಮುದ್ದಹನುಮೇಗೌಡ ಎಸ್.ಪಿ. (ಕುಣಿಗಲ್):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದಲ್ಲಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು;

(ಆ) ಈ ವೈಕಿ ಎಷ್ಟು ಕಾರ್ಖಾನೆಗಳು ಆರ್ಥಿಕವಾಗಿ ಸದೃಢವಾಗಿವೆ; ಹಾಗೂ ನಷ್ಟ ಅನುಭವಿಸುತ್ತಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು;

(ಇ) ತೊಂದರೆಯಲ್ಲಿರುವ ಕಾರ್ಖಾನೆಗಳನ್ನು ಸದೃಢಗೊಳಿಸಲು ಸರ್ಕಾರ ವಿಶೇಷ ಕಾರ್ಯಕ್ರಮವನ್ನೇನಾದರೂ ಹಾಕಿಕೊಂಡಿದೆಯೇ?

ಶೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

(ಅ) ಮಹೋದ್ಯಮದ ವ್ಯಾಪ್ತಿಯಲ್ಲಿ 78 ಸಾರ್ವಜನಿಕ ಉದ್ದಿಮೆಗಳು ಇರುತ್ತವೆ.

(ಆ) 1998-99ರ ಅಂತ್ಯದಲ್ಲಿ ಇದ್ದಂತೆ, 38 ಉದ್ದಿಮೆಗಳಲ್ಲಿ ಸಂಚಿತ ನಷ್ಟ ಇರುವುದಿಲ್ಲ ಆದ್ದರಿಂದ ಆರ್ಥಿಕವಾಗಿ ಸದೃಢವಾಗಿದೆ. ಇನ್ನುಳಿದ 40 ಉದ್ದಿಮೆಗಳು ಸಂಚಿತ ನಷ್ಟವನ್ನು ಹೊಂದಿದ್ದು ನಷ್ಟ ಅನುಭವಿಸುತ್ತಿದೆ.

(ಇ) ಪ್ರಸ್ತುತ, ಸರ್ಕಾರವು ಪರಿಣತ ತಂಡವನ್ನೊಳಗೊಂಡ ಉದ್ದಿಮೆಗಳ ಪುನಃ ನಿರ್ಮಾಣ ಆಯೋಗವೊಂದನ್ನು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ (ಸಾಉಮ) 23 ಎಆರ್‌ಯು 2000, ಬೆಂಗಳೂರು, ದಿನಾಂಕ 15.03.2000 ರಚಿಸಿರುತ್ತದೆ. ಈ ಆಯೋಗವು ಪ್ರತಿಯೊಂದು ಉದ್ದಿಮೆಗೆ ಸಂಬಂಧ ಪಟ್ಟಂತೆ ವಿಶ್ಲೇಷಣೆ ನಡೆಸಿ ಪುನಃ ರಚನೆ/ ಬಂಡವಾಳ ಹಿಂತೆಗೆದು ಕೊಳ್ಳುವಿಕೆ/ ಖಾಸಗೀಕರಣ/ ವಿಲೀನ/ ಮುಚ್ಚುವಿಕೆ ಮುಂತಾದ ವಿಷಯಗಳಲ್ಲಿ ವಿಸ್ತೃತ ಸಲಹೆಗಳನ್ನು ನೀಡುವುದು. ಆಯೋಗದ ಶಿಫಾರಸ್ಸುಗಳನ್ನು ಸರ್ಕಾರವು ಪರಿಶೀಲಿಸಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿರುವ ಕೆರೆಗಳ ಹೂಳೆತ್ತುವ ವಿಶೇಷ ಯೋಜನೆ

1838 (2285) ಶ್ರೀ ಎಸ್.ಪಿ. ಮುದ್ದನಹನುಮೇಗೌಡ (ಕುಣಿಗಲ್):

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು;

(ಆ) ಈ ಕೆರೆಗಳು ಹೂಳು ತುಂಬಿಕೊಂಡು ನೀರಾವರಿಗೆ ಯೋಗ್ಯವಾಗಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಈ ಕೆರೆಗಳ ಹೂಳೆತ್ತಲು ಸರ್ಕಾರ ವಿಶೇಷ ಯೋಜನೆಯನ್ನೇನಾದರೂ ಹಾಕಿಕೊಳ್ಳುವುದೇ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

(ಅ) ಸುಮಾರು 36,600 ಕೆರೆಗಳಿವೆ.

(ಆ) ಈ ಕೆರೆಗಳ ಪೈಕಿ ಬಹಳಷ್ಟು ಕೆರೆಗಳು ಹೂಳು ತುಂಬಿ ಶೇಖರಣಾ ಸಾಮರ್ಥ್ಯ ಕಡಿಮೆಯಾಗಿ ಕೊನೆ ಹಂತದ ಆಚ್ಚುಕಟ್ಟುಗಳು ನೀರಿಲ್ಲದೇ ನೀರಾವರಿಯಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

(ಇ) ಸಣ್ಣ ನೀರಾವರಿ ಆಯವ್ಯಯದಲ್ಲಿ ರೈತರ ಸಹಯೋಗದೊಡನೆ "ಕೆರೆಗಳಲ್ಲಿ ಹೂಳೆತ್ತುವ ಯೋಜನೆ" ಶೀರ್ಷಿಕೆ ಅಡಿಯಲ್ಲಿ ವರ್ಷಾವಾರು ಆಯವ್ಯಯದಲ್ಲಿ ನೀಡುವ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.